ಮೋಡಗಳ ಮಧ್ಯೆ ಚಿಮ್ಮಿದ ಚಿನ್ನದ ಕಿರಣಗಳಂತಿದ್ದವು.

★★★

ತಂದೆ ತೀರಿಕೊಂಡ ರಾತ್ರಿ ಬಹಳ ಹೊತ್ತಿನವರೆಗೆ ಮಾತನಾಡಿದ್ದಳು. "ಮನಸು ಅನ್ನೋದು ಜಂಪಲಿಟ್ಟ ಮನೆಯಾಗಿದೆ. ತಟ ತಟ ನೀರು ಬೀಳುತ್ತಿದೆ. ಈ ಬದುಕು ಈ ರೀತಿ ಇರುವುದೇ ಆದಲ್ಲಿ ಇದು ಯಾರಿಗೆ ಬೇಕಾಗಿತ್ತು. ಹೆಮ್ಮರದಂತಿದ್ದ ತಂದೆ ಎದುರಿಗೇ ಉರುಳಿ ಬಿದ್ದ. ಅವನು ನಮ್ಮನ್ನು ಗಿಣಿಗಳನ್ನು ಸಾಕಿದ ಹಾಗೆ ಸಾಕುತ್ತ ಬಂದ. ಹೊರಗಿನ ಬಿಸಿಲು ಗಾಳಿ ಬಡಿಯದಂತೆ ನೋಡಿಕೊಂಡ. ನಾವೇನು ಶ್ರೀಮಂತರಲ್ಲ. ಆ ಶ್ರೀಮಂತಿಕೆ ಯಾರಿಗೆ ಬೇಕಾಗಿದೆ. ಮನೆಯಲ್ಲಿಯ ಒಲೆ ಬೇಕೆನಿಸಿದಾಗ ಉರಿಯುತ್ತಿದ್ದಾಗ, ಹಂಚಿನಲ್ಲಿ ರೊಟ್ಟಿ ಬೇಯುತ್ತಿದ್ದಾಗ, ಅವ್ವನ ಖಾರಬೇಳೆಯು ಮಡಿಕೆ ತುಂಬಿರುವಾಗ, ಮೂಲೆಯ ಗಡಿಗಿಯಲ್ಲಿ ಹುಳ್ಳಾನುಚ್ಚು ಸಣ್ಣಗೇ ಅರಳುತ್ತಿದ್ದಾಗ, ನೆಲುವಿನಲ್ಲಿ ಒಂದರ ಮೇಲೊಂದು ಕುಡಿಕೆಯಲ್ಲಿ ಹಾಲು ಹೆಪ್ಪುಗಟ್ಟಿ ಕೆನೆಮೊಸರಾಗುತ್ತಿದ್ದಾಗ, ಮನೆಯಲ್ಲಿರುವವರೆಲ್ಲ ಅವರವರ ಕೆಲಸಗಳನ್ನು ಮಾಡುತ್ತ ಸಮಾಧಾನದಿಂದಿದ್ದಾಗ, ಹಾಸಲು ಹೊದೆಯಲು ಜಮಖಾನಾ, ಚದ್ದರಗಳಿದ್ದಾಗ, ಮನೆ ತುಂಬ ಮಕ್ಕಳು ಓಡಾಡುತ್ತ ನಗೆಯ ರಂಗೋಲಿ ಹಾಕುತ್ತಿದ್ದಾಗ, ದೇವರ ಕೋಣೆಯಲ್ಲಿಯ ದೇವರು ಆಗಾಗ ಕಣ್ಣು ಬಿಡುತ್ತಿದ್ದಾಗ, ಓಣಿಯ ಸದ್ದುಗಳು ಲೋಕ ವ್ಯವಹಾರದ ತರಂಗಗಳಾಗಿ ಕಿವಿ ಮುಟ್ಟುತ್ತಿದ್ದಾಗ, ಮನೆಯ ಬಳಿ ಬರುವ ಮೋಡ, ತಣ್ಣನೆಯ ಗಾಳಿ ಮಾತನಾಡಿಸಿ ಹೋಗುತ್ತಿದ್ದಾಗ, ಎಳೆಯ ಕರು ಅಂಬಾ ಎಂದು ಕೂಗುತ್ತಿದ್ದಾಗ, ಕಾಪಾಡುವ ತಂದೆಯ ಧ್ವನಿ ಗಟ್ಟಿಯಾಗಿ ಕೇಳುತ್ತಿದ್ದಾಗ, ಮೆತ್ತಗಿನ ಬೆರಳುಗಳ ತಾಯಿಯ ಕೈ, ಲೋಕದ ಎಲ್ಲ ಅನುರಾಗಗಳ ಸ್ಪರ್ಶ ಸೂಸುತ್ತಿದ್ದಾಗ, ಬೇರೆ ಶ್ರೀಮಂತಿಕೆ ಯಾರಿಗೆ ಬೇಕು? ಅದೆಂಥ ಶ್ರೀಮಂತಿಕೆ ಬೇಕು! ಅಣ್ಣಾ! ನಾವು ದುಡಿಯುತ್ತಾ ದುಡಿಯುತ್ತಾ, ನಾಲ್ಕು ದುಡ್ಡು ಗಳಿಸುತ್ತಾ, ಬಂಗಾರದಂಥ ಏನನ್ನೋ ಕಳೆದುಕೊಂಡೆವು, ಕೈಯಲ್ಲಿಯ ಮುತ್ತನ್ನು ನೀರಿಗೆ ಬಿಟ್ಟ ಅನುಭವವಾಯ್ತು. ನಾವೆಲ್ಲ ವಯಸ್ಕರಾಗಿರುವುದಕ್ಕಿಂತ ಮೊದಲಿನ, ಯಾವುದೇ ಕಲ್ಮಶವಿಲ್ಲದ ಆ ಮುಗ್ಧತೆಯನ್ನು ಕಲಿಕೆಯ ನೆಪದಲ್ಲಿ ಹುತ್ತದಲ್ಲಿ ಹಾಕಿಬಿಟ್ಟೆವು. ಈಗೆಲ್ಲಾ ತಿಳಿಯುತ್ತಿದೆ! ಆದರೆ ಸುಧಾರಿಸಿಕೊಳ್ಳಲೂ ಸಮಯವಿಲ್ಲ. ಪ್ರವಾಹದಲ್ಲಿ ಕೊಚ್ಚಿಹೋದಂತೆ ಚದುರಿಹೋಗಿದ್ದೇವೆ. ಸಂಕಟದಲ್ಲಿ ನಾನೇನೋ ಕೂಗಬಹುದು! ನಿನ್ನ ಸಂಕಟದ ಧ್ವನಿಯೂ ಅಂತಹದೇ ಅಲ್ಲವೆ? ನೀನೇ ನೋಡಿದಿ, ಮೊನ್ನೆ ಮುಂಬಯಿಯಿಂದ ಬಂದಿದ್ದ ವೀರಯ್ಯ ನಮ್ಮ ಪಡಸಾಲೆಯಲ್ಲಿ ಕುಳಿತವ, ಐದಾರು ತಾಸು ಹಾಗೆಯೇ ಕುಳಿತು ಬಿಟ್ಟಿದ್ದ. ಅಪ್ಪ ಅವ್ವ ಕೊಟ್ಟ ಪ್ರೀತಿಯನ್ನು ನೆನಪಿಸಿಕೊಂಡ. ಕಳೆದು ಹೋದದ್ದನ್ನೆಲ್ಲಾ ಮತ್ತೆ ಪಡೆಯಲು ಬಂದವನಂತೆ ತೆರಪಿಲ್ಲದೇ ಮಾತಿನ ಮೇಲೆ ಮಾತು ಕಟ್ಟುತ್ತ ಹೋದ. ಅವ ಹೀಗೇಕೆ ಮಾತನಾಡುತ್ತಿದ್ದಾನೆಂದು ನಾನು ಒಂದು ಗಳಿಗೆ ಚಿಂತೆಗೀಡಾಗಿದ್ದೆ. ಅವನು ಸಾಕಷ್ಟು ಗಳಿಕೆ ಮಾಡಿದ್ದಾನೆ, ಆದರೆ ಮುಂಬಯಿಗೆ ಬದಲಾಗಿ, ಸಂತೋಷದ ಗೂಡಾಗಿದ್ದ ನನ್ನೂರನ್ನು, ನಮ್ಮ ಪಡಸಾಲೆಯಲ್ಲಿ ಹುಡುಕುತ್ತಿದ್ದ. ನೆನಪುಗಳು ಒಂದೇ, ಎರಡೇ! ಸಾವಿರಾರು. ಮನುಷ್ಯನ ಹುಡುಕಾಟಗಳೂ ವಿಚಿತ್ರವಾಗಿರುತ್ತವೆ. ಆದರೆ ಸರಿಯಾಗಿಯೇ ಇರುತ್ತವೆ. ನಾನು, ನೀನು ಸಮೀಪದಲ್ಲಿಯೇ ಕೂತಾಗ ನಾವು ಮಾತನಾಡಿದ್ದೇ ಕಡಿಮೆ. ನಮ್ಮ ಮೌನವೇ ಮಾತನಾಡುತ್ತದೆ. ನನ್ನ ಮನಸ್ಸಿನಲ್ಲಿರುವುದು, ನಿನ್ನ ಮನಸ್ಸಿನಲ್ಲಿರುವುದೂ ಒಂದೇ ಆಗಿರುತ್ತದೆ. ನಾನು 'ಹಾ' ಎಂದರೆ ನೀನು 'ಹೌದು' ಎನ್ನುತ್ತೀ. ನಮ್ಮ ಉಸಿರಿಗೂ ಕೂಡ